ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 121-129
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗುಪ್ತ ಕಾಲದ ಆಡಳಿತ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆ

**ಡಾ. ಬಿ.ಸಿ. ಸುರೇಶ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ

**Abstract:**

*ಗುಪ್ತ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯು ಮೌರ್ಯರ ಕೇಂದ್ರೀಕೃತ ಆಡಳಿತಕ್ಕಿಂತ ಭಿನ್ನವಾಗಿ ವಿಕೇಂದ್ರೀಕೃತ ಸ್ವರೂಪವನ್ನು ಹೊಂದಿದ್ದು, ಕೇಂದ್ರ ಮತ್ತು ಪ್ರಾಂತೀಯ ಆಡಳಿತದ ಸಮನ್ವಯವನ್ನು ಪ್ರತಿಬಿಂಬಿಸುತ್ತದೆ. ರಾಜನು ಸರ್ವೋಚ್ಚ ಅಧಿಕಾರಿಯಾಗಿದ್ದರೂ, ಪ್ರಾಂತೀಯ ಅಧಿಕಾರಿಗಳು, ಸಾಮಂತರು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾತ್ಮಕ ಅಧಿಕಾರವನ್ನು ಹಂಚಿಕೆ ಮಾಡಲಾಗಿತ್ತು. ಭುಕ್ತಿ, ವಿಷಯ, ಉಪವಿಭಾಗ ಮತ್ತು ಗ್ರಾಮಗಳ ಆಧಾರದ ಮೇಲೆ ರೂಪುಗೊಂಡ ಆಡಳಿತ ವ್ಯವಸ್ಥೆಯು ಸ್ಥಳೀಯ ಆಡಳಿತದ ದಕ್ಷತೆಯನ್ನು ಹೆಚ್ಚಿಸಿತು. ಗುಪ್ತ ರಾಜರು ಮಹಾರಾಜಾಧಿರಾಜ, ಪರಮೇಶ್ವರ ಮತ್ತು ಪರಮಭಟ್ಟಾರಕ ಮುಂತಾದ ಬಿರುದುಗಳ ಮೂಲಕ ತಮ್ಮ ಸಾರ್ವಭೌಮತ್ವವನ್ನು ಪ್ರತಿಪಾದಿಸಿದರು. ಆದರೆ ಸಾಮಂತರಿಗೆ ಹೆಚ್ಚಿನ ಅಧಿಕಾರ ನೀಡಿದ ಪರಿಣಾಮ ಕೇಂದ್ರೀಯ ಆಡಳಿತ ಕ್ರಮೇಣ ದುರ್ಬಲಗೊಂಡು ಸಾಮಂತಶಾಹಿ ಪ್ರವೃತ್ತಿಗಳು ಬಲಗೊಂಡವು. ಈ ಲೇಖನವು ಗುಪ್ತರ ಆಡಳಿತ ವ್ಯವಸ್ಥೆಯ ರಚನೆ, ವೈಶಿಷ್ಟ್ಯಗಳು ಹಾಗೂ ಅದರ ಐತಿಹಾಸಿಕ ಪರಿಣಾಮಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ.*

**Keywords:** *ಗುಪ್ತ ಸಾಮ್ರಾಜ್ಯ, ಆಡಳಿತ ವ್ಯವಸ್ಥೆ, ವಿಕೇಂದ್ರೀಕರಣ, ಸಾಮಂತಶಾಹಿ, ಭುಕ್ತಿ ಆಡಳಿತ.*

## ಪೀಠಿಕೆ

ಗುಪ್ತರ ಆಡಳಿತ ವ್ಯವಸ್ಥೆಯು ಭಾರತೀಯ ರಾಜಕೀಯ ಮತ್ತು ಆಡಳಿತ ಪರಂಪರೆಯ ಬೆಳವಣಿಗೆಯಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಮೌರ್ಯರ ಕೇಂದ್ರೀಕೃತ ಆಡಳಿತ ವ್ಯವಸ್ಥೆಯಿಂದ ಆರಂಭಿಕ ಮಧ್ಯಕಾಲೀನ ಭಾರತದ ಸಾಮಂತಶಾಹಿ ಆಡಳಿತ ವ್ಯವಸ್ಥೆಯತ್ತ ನಡೆದ ಪರಿವರ್ತನೆಯ ಸೇತುವೆಯಾಗಿ ಗುಪ್ತರ ಆಡಳಿತವನ್ನು ಪರಿಗಣಿಸಲಾಗುತ್ತದೆ. ಆಡಳಿತಾತ್ಮಕ ರಚನೆ, ರಾಜಪ್ರಭುತ್ವದ ಪರಿಕಲ್ಪನೆ, ಸ್ಥಳೀಯ ಆಡಳಿತ ವ್ಯವಸ್ಥೆ ಹಾಗೂ ಸಾಮಂತರ ಪಾತ್ರದ ದೃಷ್ಟಿಯಿಂದ ಗುಪ್ತರ ಆಡಳಿತವು ಅನಂತರದ ಅನೇಕ ಭಾರತೀಯ ರಾಜವಂಶಗಳಿಗೆ ಮಾದರಿಯಾಯಿತು. ಆದ್ದರಿಂದ, ಭಾರತೀಯ ಇತಿಹಾಸದ ಆರಂಭಿಕ ಮಧ್ಯಕಾಲೀನ ಅವಧಿಯಲ್ಲಿ ಕಂಡುಬರುವ ಆಡಳಿತ ವ್ಯವಸ್ಥೆಯ ಮೂಲಭೂತ ಲಕ್ಷಣಗಳು ಸೈದ್ಧಾಂತಿಕವಾಗಿಯೂ ಮತ್ತು ಪ್ರಾಯೋಗಿಕವಾಗಿಯೂ ಗುಪ್ತರ ಆಡಳಿತದಲ್ಲಿ ರೂಪುಗೊಂಡವು. ಗುಪ್ತ ಅರಸರು ತಮ್ಮ ರಾಜಕೀಯ ಸಾರ್ವಭೌಮತ್ವ ಮತ್ತು ಸಾಮ್ರಾಜ್ಯಶಕ್ತಿಯನ್ನು ಪ್ರತಿಪಾದಿಸುವ ಉದ್ದೇಶದಿಂದ ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ರಾಜನ್ ಎಂಬ ಸರಳ ಬಿರುದಿನ ಬದಲಿಗೆ ಮಹಾರಾಜಾಧಿರಾಜ, ಪರಮಭಟ್ಟಾರಕ, ಪರಮೇಶ್ವರ ಹಾಗೂ ಪರಮದೈವತ ಎಂಬಂತಹ

***Please cite this article as:*** ಸುರೇಶ, ಬಿ.ಸಿ. (2026). ಗುಪ್ತ ಕಾಲದ ಆಡಳಿತ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 5(3), 121–129

ಭವ್ಯ ಮತ್ತು ವೈಭವಪೂರ್ಣ ಬಿರುದುಗಳನ್ನು ಅಳವಡಿಸಿಕೊಂಡರು. ಈ ಬಿರುದುಗಳು ಕೇವಲ ರಾಜನ ಅಧಿಕಾರವನ್ನು ಸೂಚಿಸುವುದಲ್ಲದೆ, ಅಧೀನ ರಾಜರ ಮೇಲಿನ ಅವನ ಸಾರ್ವಭೌಮತ್ವ ಹಾಗೂ ಸಾಮ್ರಾಜ್ಯದ ಉನ್ನತ ರಾಜಕೀಯ ಸ್ಥಾನಮಾನವನ್ನು ಪ್ರತಿಬಿಂಬಿಸುತ್ತವೆ. ಉತ್ತರ ಬಂಗಾಳದ ಶಾಸನಗಳಲ್ಲಿ ಗುಪ್ತ ಚಕ್ರವರ್ತಿಗಳಿಗೆ ಪರಮದೈವತ, ಪರಮಭಟ್ಟಾರಕ ಮತ್ತು ಮಹಾರಾಜಾಧಿರಾಜ ಎಂಬ ಬಿರುದುಗಳನ್ನು ಒಟ್ಟಾಗಿ ಬಳಸಿರುವುದು ಕಂಡುಬರುತ್ತದೆ. ಈ ಬಿರುದುಗಳು ಅನಂತರದ ಅನೇಕ ಭಾರತೀಯ ಸಾಮ್ರಾಜ್ಯಗಳ ಸರ್ವೋಚ್ಚ ಆಡಳಿತಗಾರರ ಅಧಿಕೃತ ಬಿರುದುಗಳಾಗಿ ಸ್ಥಿರವಾದವು. ಗುಪ್ತ ರಾಜರು ತಮ್ಮ ಆಡಳಿತಕ್ಕೆ ಧಾರ್ಮಿಕ ಮತ್ತು ನೈತಿಕ ಮಾನ್ಯತೆಯನ್ನು ಒದಗಿಸುವ ಉದ್ದೇಶದಿಂದ ತಮ್ಮನ್ನು ದೈವಿಕ ಗುಣಗಳನ್ನು ಹೊಂದಿದ ಆಡಳಿತಗಾರರೆಂದು ಬಿಂಬಿಸಿಕೊಂಡರು. ಈ ಹಿನ್ನೆಲೆಯಲ್ಲಿ ಅಲಹಾಬಾದ್ ಸ್ತಂಭ ಶಾಸನದಲ್ಲಿ ಸಮುದ್ರಗುಪ್ತನನ್ನು ಭೂಮಿಯ ಮೇಲೆ ನೆಲೆಸಿರುವ ದೇವತೆ ಎಂದು ವರ್ಣಿಸಲಾಗಿದೆ. ಇಂತಹ ವರ್ಣನೆಗಳು ರಾಜತ್ವವನ್ನು ಕೇವಲ ರಾಜಕೀಯ ಅಧಿಕಾರವೆಂದು ಪರಿಗಣಿಸದೆ, ಅದಕ್ಕೆ ದೈವಿಕತೆ ಮತ್ತು ಧಾರ್ಮಿಕ ಪಾವಿತ್ರ್ಯದ ಆಯಾಮವನ್ನು ನೀಡುವ ಪ್ರಯತ್ನವನ್ನು ಪ್ರತಿಬಿಂಬಿಸುತ್ತವೆ. ಈ ಅವಧಿಯಲ್ಲಿ ರಚಿಸಲ್ಪಟ್ಟ ವಿವಿಧ ಸ್ಮೃತಿಗಳು–ಧರ್ಮಶಾಸ್ತ್ರಗಳು ರಾಜನನ್ನು ಧರ್ಮದ ರಕ್ಷಕ, ನ್ಯಾಯದ ಪಾಲಕ ಹಾಗೂ ಪ್ರಜೆಯ ಕಲ್ಯಾಣದ ಹೊಣೆಗಾರನಾಗಿ ಚಿತ್ರಿಸುತ್ತವೆ. ರಾಜನು ಧರ್ಮದ ಆಧಾರದ ಮೇಲೆ ಆಡಳಿತ ನಡೆಸಬೇಕೆಂಬ ತತ್ವವನ್ನು ಒತ್ತಿಹೇಳುವುದರ ಜೊತೆಗೆ, ಅವನ ದೈವಿಕ ಗುಣಗಳನ್ನೂ ಪ್ರತಿಪಾದಿಸುತ್ತವೆ.

**ಗುಪ್ತರ ಕೇಂದ್ರ ಆಡಳಿತ ಮತ್ತು ಉನ್ನತ ಅಧಿಕಾರಿಗಳು**

ಗುಪ್ತರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಹೊಸ ಆಡಳಿತಾತ್ಮಕ ಮಾದರಿಯನ್ನು ರೂಪಿಸುವ ಬದಲು, ಹಿಂದಿನ ರಾಜವಂಶಗಳ ಕಾಲದಿಂದ ಪ್ರಚಲಿತದಲ್ಲಿದ್ದ ಆಡಳಿತಾತ್ಮಕ ಸಂಪ್ರದಾಯಗಳು, ಹುದ್ದೆಗಳು ಹಾಗೂ ಅಧಿಕಾರ ವ್ಯವಸ್ಥೆಯನ್ನು ಪರಿಷ್ಕರಿಸಿ ಮುಂದುವರಿಸಿದರು. ಮೌರ್ಯರು, ಶಾತವಾಹನರು ಮತ್ತು ಕುಶಾನರ ಆಡಳಿತ ಪರಂಪರೆಯ ಪ್ರಭಾವವು ಗುಪ್ತರ ಆಡಳಿತದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಗುಪ್ತರ ಆಡಳಿತವು ಸಂಪ್ರದಾಯ ಮತ್ತು ನವೀನತೆಯ ಸಮನ್ವಯವನ್ನು ಒಳಗೊಂಡ ಆಡಳಿತ ವ್ಯವಸ್ಥೆಯಾಗಿತ್ತು. ಗುಪ್ತ ಸಾಮ್ರಾಜ್ಯದ ಕೇಂದ್ರ ಆಡಳಿತದಲ್ಲಿ ಮಂತ್ರಿ ಅತ್ಯುನ್ನತ ನಾಗರಿಕ ಅಧಿಕಾರಿಯಾಗಿದ್ದನು.ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಮಂತ್ರಿಯ ಸ್ಥಾನಕ್ಕೆ ವಿಶೇಷ ಮಹತ್ವವನ್ನು ನೀಡಲಾಗಿದ್ದು, ಗುಪ್ತರ ಕಾಲದಲ್ಲಿಯೂ ಈ ಹುದ್ದೆಯು ರಾಜ್ಯದ ಆಡಳಿತ, ನೀತಿ ರೂಪಣೆ ಹಾಗೂ ರಾಜನಿಗೆ ಸಲಹೆ ನೀಡುವ ಪ್ರಮುಖ ಜವಾಬ್ದಾರಿಯನ್ನು ಹೊಂದಿತ್ತು. ರಾಜನ ಆಡಳಿತಾತ್ಮಕ ನಿರ್ಧಾರಗಳಲ್ಲಿ ಮಂತ್ರಿಯ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಸಾಮ್ರಾಜ್ಯದ ಸೈನಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಹಲವು ಉನ್ನತ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಇವರಲ್ಲಿ ಮಹಾಬಲಾಧಿಕೃತ, ಮಹಾದಂಡನಾಯಕ, ಮಹಾ ಪ್ರತಿಹಾರ ಮತ್ತು ಸಂಧಿವಿಗ್ರಹಿಕ ಪ್ರಮುಖರಾಗಿದ್ದರು. ಮಹಾಬಲಾಧಿಕೃತನು ಸಾಮ್ರಾಜ್ಯದ ಸೈನಿಕ ವ್ಯವಸ್ಥೆಯ ಮುಖ್ಯಸ್ಥನಾಗಿದ್ದು, ಶಾತವಾಹನರ ಕಾಲದ ಮಹಾಸೇನಾಪತಿ ಹುದ್ದೆಗೆ ಸಮಾನನೆಂದು ಪರಿಗಣಿಸಲಾಗಿದೆ. ಈ ಅಧಿಕಾರಿಯು ಸೇನೆಯ ವಿವಿಧ ವಿಭಾಗಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದ್ದನು. ಅವನ ಅಧೀನದಲ್ಲಿ ಮಹಾಶ್ವಪತಿ–ಅಶ್ವದಳದ ಮುಖ್ಯಸ್ಥ, ಮಹಾಪೀಲುಪತಿ –ಆನೆಗಳ ದಳದ ಮುಖ್ಯಸ್ಥ, ಸೇನಾಪತಿ ಹಾಗೂ ಬಲಾಧಿಕೃತವೆಂಬಂತಹ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದರು. ಇದರಿಂದ ಗುಪ್ತರ ಸೈನಿಕ ಆಡಳಿತವು ಸುಸಂಘಟಿತವಾಗಿದ್ದು, ವಿವಿಧ ದಳಗಳ

ನಡುವೆ ಸಮನ್ವಯ ಸಾಧಿಸುವ ವ್ಯವಸ್ಥೆಯನ್ನು ಹೊಂದಿತ್ತು ಎಂಬುದು ತಿಳಿದುಬರುತ್ತದೆ. ಮಹಾದಂಡನಾಯಕನು ಸೈನಿಕ ಮತ್ತು ಕಾನೂನು–ಸುವ್ಯವಸ್ಥೆಗೆ ಸಂಬಂಧಿಸಿದ ಪ್ರಮುಖ ಅಧಿಕಾರಿಯಾಗಿದ್ದನು. ಈ ಹುದ್ದೆಯ ಮೂಲವನ್ನು ಕುಶಾನರ ಆಡಳಿತ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ. ಗುಪ್ತರ ಕಾಲದಲ್ಲಿ ಮಹಾದಂಡನಾಯಕನು ಸೇನೆಯ ಪ್ರಮುಖ ಅಧಿಕಾರಿಯಾಗಿ ಮಾತ್ರವಲ್ಲದೆ, ರಾಜ್ಯದ ಭದ್ರತೆ, ದಂಡನೆ ಹಾಗೂ ನ್ಯಾಯದ ಜಾರಿಯಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸಿದ್ದನೆಂದು ಇತಿಹಾಸಕಾರರು ಅಭಿಪ್ರಾಯಪಡು ತ್ತಾರೆ. ಮಹಾಪ್ರತಿಹಾರನು ರಾಜಮನೆತನದ ಭದ್ರತೆ ಮತ್ತು ಅರಮನೆಯ ರಕ್ಷಣೆಯ ಮುಖ್ಯಸ್ಥನಾಗಿದ್ದನು. ಅರಮನೆಯ ಪ್ರವೇಶ ನಿಯಂತ್ರಣ, ರಾಜನ ವೈಯಕ್ತಿಕ ಭದ್ರತೆ ಹಾಗೂ ರಾಜಸಭೆಯ ಶಿಸ್ತನ್ನು ಕಾಪಾಡುವ ಜವಾಬ್ದಾರಿ ಈ ಅಧಿಕಾರಿಯದ್ದಾಗಿತ್ತು. ಅನಂತರದ ಅನೇಕ ಭಾರತೀಯ ರಾಜವಂಶಗಳಲ್ಲಿಯೂ ಈ ಹುದ್ದೆಯು ಪ್ರಮುಖ ಸ್ಥಾನವನ್ನು ಪಡೆದಿರುವುದು ಗಮನಾರ್ಹವಾಗಿದೆ. ಗುಪ್ತರ ಶಾಸನಗಳಲ್ಲಿ ಮೊದಲ ಬಾರಿಗೆ ಸ್ಪಷ್ಟವಾಗಿ ಉಲ್ಲೇಖವಾಗುವ ಉನ್ನತ ಅಧಿಕಾರಿಯೆಂದರೆ ಸಂಧಿವಿಗ್ರಹಿಕ. ಈ ಅಧಿಕಾರಿಯು ಇಂದಿನ ಅರ್ಥದಲ್ಲಿ ವಿದೇಶಾಂಗ ಸಚಿವ ಅಥವಾ ರಾಜತಾಂತ್ರಿಕ ವ್ಯವಹಾರಗಳ ಮುಖ್ಯಸ್ಥನಾಗಿದ್ದನು. ನೆರೆಯ ರಾಜ್ಯಗಳೊಂದಿಗೆ ಸಂಧಿ–ಒಪ್ಪಂದ, ವಿಗ್ರಹ–ಯುದ್ಧ, ರಾಜತಾಂತ್ರಿಕ ಮಾತುಕತೆ, ಒಪ್ಪಂದಗಳ ನಿರ್ವಹಣೆ ಹಾಗೂ ವಿದೇಶಾಂಗ ನೀತಿಯನ್ನು ರೂಪಿಸುವ ಕಾರ್ಯವನ್ನು ಈ ಅಧಿಕಾರಿ ನಿರ್ವಹಿಸುತ್ತಿದ್ದನು. ಈ ಹುದ್ದೆಯು ಅನಂತರದ ಮಧ್ಯಕಾಲೀನ ಭಾರತೀಯ ಆಡಳಿತ ವ್ಯವಸ್ಥೆಗಳಲ್ಲಿಯೂ ದೀರ್ಘಕಾಲ ಪ್ರಮುಖ ಸ್ಥಾನವನ್ನು ಕಾಯ್ದುಕೊಂಡಿತು.

**ಕುಮಾರಮಾತ್ಯರು, ಆಯುಕ್ತರು ಮತ್ತು ಪ್ರಾಂತೀಯ ಆಡಳಿತ**

ಗುಪ್ತ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯು ಕೇಂದ್ರ ಮತ್ತು ಪ್ರಾಂತೀಯ ಆಡಳಿತದ ನಡುವೆ ಪರಿಣಾಮಕಾರಿ ಸಮನ್ವಯವನ್ನು ಕಾಯ್ದುಕೊಳ್ಳುವ ರೀತಿಯಲ್ಲಿ ರೂಪುಗೊಂಡಿತ್ತು. ಈ ಉದ್ದೇಶಕ್ಕಾಗಿ ವಿವಿಧ ಹಂತಗಳ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಅವರಲ್ಲಿ ಕುಮಾರಮಾತ್ಯರು ಮತ್ತು ಆಯುಕ್ತರು ಪ್ರಮುಖ ಸ್ಥಾನವನ್ನು ಹೊಂದಿದ್ದು, ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಆಡಳಿತದ ನಡುವಿನ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಮೂಲಕ ಚಕ್ರವರ್ತಿಯ ಆದೇಶಗಳು ಪ್ರಾಂತ ಹಾಗೂ ಜಿಲ್ಲಾಮಟ್ಟದ ಆಡಳಿತಕ್ಕೆ ತಲುಪುತ್ತಿದ್ದವು ಮತ್ತು ಸ್ಥಳೀಯ ಆಡಳಿತದ ವರದಿಗಳು ಕೇಂದ್ರ ಸರ್ಕಾರಕ್ಕೆ ರವಾನೆಯಾಗುತ್ತಿದ್ದವು. ಕುಮಾರಮಾತ್ಯರು ಗುಪ್ತ ಆಡಳಿತದ ಅತ್ಯಂತ ಪ್ರಮುಖ ಅಧಿಕಾರಿಗಳಾಗಿದ್ದರು. ಇವರನ್ನು ನೇರವಾಗಿ ಚಕ್ರವರ್ತಿಯೇ ನೇಮಕ ಮಾಡುತ್ತಿದ್ದನು. ಇವರು ರಾಜನ ವಿಶ್ವಾಸಾರ್ಹ ಅಧಿಕಾರಿಗಳಾಗಿದ್ದು, ಆಡಳಿತ, ತೆರಿಗೆ ನಿರ್ವಹಣೆ, ನ್ಯಾಯ, ಭದ್ರತೆ ಹಾಗೂ ರಾಜಾಜ್ಞೆಗಳ ಅನುಷ್ಠಾನದ ಮೇಲ್ವಿಚಾರಣೆಯಂತಹ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಕೆಲವು ಇತಿಹಾಸಕಾರರ ಅಭಿಪ್ರಾಯದಂತೆ, ಕುಮಾರಮಾತ್ಯರು ರಾಜವಂಶಕ್ಕೆ ನಿಕಟ ಸಂಬಂಧ ಹೊಂದಿದ್ದ ಅಥವಾ ಉನ್ನತ ಶಿಕ್ಷಣ ಮತ್ತು ಆಡಳಿತ ಅನುಭವ ಪಡೆದ ವ್ಯಕ್ತಿಗಳಾಗಿದ್ದರು. ಇವರಿಗೆ ಸೇವೆಗೆ ಪ್ರತಿಯಾಗಿ ನಗದು ರೂಪದಲ್ಲಿ ವೇತನ ನೀಡಲಾಗುತ್ತಿತ್ತು ಎಂಬುದನ್ನು ಶಾಸನಾಧಾರಗಳು ಸೂಚಿಸುತ್ತವೆ. ಇದು ಗುಪ್ತರ ಆಡಳಿತದಲ್ಲಿ ವೃತ್ತಿಪರ ಅಧಿಕಾರಶಾಹಿ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಆಯುಕ್ತರು ಮತ್ತೊಂದು ಪ್ರಮುಖ ಆಡಳಿತಾತ್ಮಕ ವರ್ಗವಾಗಿದ್ದರು. ಇವರ ಪ್ರಮುಖ ಜವಾಬ್ದಾರಿಯು ಚಕ್ರವರ್ತಿಯಿಂದ ಸೋಲಿಸಲ್ಪಟ್ಟ ರಾಜರು ಅಥವಾ

ಅಧೀನ ರಾಜ್ಯಗಳಿಂದ ತೆರಿಗೆ, ಕಾಣಿಕೆ ಹಾಗೂ ರಾಜಸ್ವವನ್ನು ಸಂಗ್ರಹಿಸಿ ರಾಜ್ಯದ ಖಜಾನೆಗೆ ಸೇರಿಸುವುದಾಗಿತ್ತು. ಇದರ ಜೊತೆಗೆ, ಕೆಲವು ಸಂದರ್ಭಗಳಲ್ಲಿ ಆಯುಕ್ತರನ್ನು ಪ್ರಮುಖ ನಗರಗಳು ಅಥವಾ ಜಿಲ್ಲೆಗಳ ಆಡಳಿತಾಧಿಕಾರಿಗಳಾಗಿ ನೇಮಿಸಲಾಗುತ್ತಿತ್ತು. ಅವರು ಸ್ಥಳೀಯ ಆಡಳಿತ, ಕಾನೂನು ಮತ್ತು ಸುವ್ಯವಸ್ಥೆ, ತೆರಿಗೆ ಸಂಗ್ರಹಣೆ ಹಾಗೂ ರಾಜಾಜ್ಞೆಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತಿದ್ದರು. ಆಯುಕ್ತರು ಕೇಂದ್ರ ಆಡಳಿತದ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಗುಪ್ತ ಸಾಮ್ರಾಜ್ಯವನ್ನು ಆಡಳಿತಾತ್ಮಕವಾಗಿ ಭುಕ್ತಿಗಳೆಂದು ಕರೆಯಲ್ಪಡುವ ಪ್ರಾಂತ್ಯಗಳಾಗಿ ವಿಭಾಗಿಸಲಾಗಿತ್ತು. ಈ ಪ್ರಾಂತ್ಯಗಳ ಆಡಳಿತವನ್ನು ಸಾಮಾನ್ಯವಾಗಿ ಉಪರಿಕ ಅಥವಾ ಪ್ರಾದೇಶಿಕ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಪ್ರಾದೇಶಿಕ ಎಂಬ ಹುದ್ದೆಯು ಮೌರ್ಯ ಚಕ್ರವರ್ತಿ ಅಶೋಕನ ಆಡಳಿತದಲ್ಲಿ ಬಳಕೆಯಲ್ಲಿದ್ದ ಅಧಿಕಾರ ವ್ಯವಸ್ಥೆಯ ಮುಂದುವರಿದ ರೂಪವೆಂದು ಪರಿಗಣಿಸಲಾಗಿದೆ. ಮತ್ತೊಂದೆಡೆ, ಉಪರಿಕರು ಸಾಮಾನ್ಯವಾಗಿ ರಾಜವಂಶದ ಸದಸ್ಯರು, ರಾಜಕುಮಾರರು ಅಥವಾ ಚಕ್ರವರ್ತಿಯ ಅತ್ಯಂತ ವಿಶ್ವಾಸಾರ್ಹ ಅಧಿಕಾರಿಗಳಾಗಿದ್ದು, ಅವರಿಗೆ ಪ್ರಾಂತೀಯ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಲಾಗುತ್ತಿತ್ತು. ಇವರು ತೆರಿಗೆ ಸಂಗ್ರಹಣೆ, ನ್ಯಾಯನಿರ್ವಹಣೆ, ಸೈನಿಕ ವ್ಯವಸ್ಥೆ ಹಾಗೂ ಕಾನೂನು–ಸುವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುತ್ತಿದ್ದರು. ಗುಪ್ತರ ಆಡಳಿತದಲ್ಲಿ ಕೇಂದ್ರ ಸರ್ಕಾರವು ಪ್ರಾಂತೀಯ ಆಡಳಿತದ ಮೇಲೆ ನಿಯಂತ್ರಣವನ್ನು ಹೊಂದಿದ್ದರೂ, ಪ್ರಾಂತೀಯ ಅಧಿಕಾರಿಗಳಿಗೆ ಸಾಕಷ್ಟು ಆಡಳಿತಾತ್ಮಕ ಸ್ವಾಯತ್ತತೆಯನ್ನು ನೀಡಲಾಗಿತ್ತು. ಈ ವಿಕೇಂದ್ರೀಕೃತ ವ್ಯವಸ್ಥೆಯು ಸಾಮ್ರಾಜ್ಯದ ವಿಶಾಲ ಭೂಪ್ರದೇಶವನ್ನು ಸಮರ್ಥವಾಗಿ ಆಡಳಿತ ನಡೆಸಲು ನೆರವಾದರೂ, ಅನಂತರದ ಅವಧಿಯಲ್ಲಿ ಪ್ರಾಂತೀಯ ಅಧಿಕಾರಿಗಳು ಮತ್ತು ಸಾಮಂತರ ಪ್ರಭಾವ ಹೆಚ್ಚಾಗಲು ಕಾರಣವಾಯಿತು. ಈ ಬೆಳವಣಿಗೆಯು ಕ್ರಮೇಣ ಗುಪ್ತ ಸಾಮ್ರಾಜ್ಯದ ಕೇಂದ್ರೀಯ ಅಧಿಕಾರವನ್ನು ದುರ್ಬಲಗೊಳಿಸಿ, ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ಸಾಮಂತಶಾಹಿಯ ಬೆಳವಣಿಗೆಗೆ ಪೂರಕವಾಯಿತು.

**ಜಿಲ್ಲಾ ಆಡಳಿತ ಮತ್ತು ಸ್ಥಳೀಯ ಸ್ವ–ಆಡಳಿತ ಸಂಸ್ಥೆಗಳು**

ಗುಪ್ತ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯು ಬಹುಹಂತದ ಆಡಳಿತಾತ್ಮಕ ರಚನೆಯನ್ನು ಹೊಂದಿತ್ತು. ಭುಕ್ತಿ–ಪ್ರಾಂತ್ಯಗಳನ್ನು ಮತ್ತಷ್ಟು ವಿಷಯಗಳೆಂದು ಕರೆಯಲ್ಪಡುವ ಜಿಲ್ಲೆಗಳಾಗಿ ವಿಭಾಗಿಸಲಾಗುತ್ತಿತ್ತು. ಆಡಳಿತದ ಪರಿಣಾಮಕಾರಿತ್ವ ವನ್ನು ಹೆಚ್ಚಿಸುವ ಉದ್ದೇಶದಿಂದ ಈ ವಿಭಾಗವನ್ನು ರೂಪಿಸಲಾಗಿದ್ದು, ಪ್ರತಿ ಜಿಲ್ಲೆಯ ಆಡಳಿತವನ್ನು ಕುಮಾರಮಾತ್ಯ, ಆಯುಕ್ತ ಅಥವಾ ವಿಷಯಪತಿ ಎಂಬ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಇವರಲ್ಲಿ ವಿಷಯಪತಿ ಜಿಲ್ಲೆಯ ಮುಖ್ಯ ಆಡಳಿತಾಧಿ ಕಾರಿಯಾಗಿದ್ದು, ತೆರಿಗೆ ಸಂಗ್ರಹಣೆ, ನ್ಯಾಯನಿರ್ವಹಣೆ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ರಾಜಾಜ್ಞೆಗಳ ಅನುಷ್ಠಾನದ ಜವಾಬ್ದಾರಿಯನ್ನು ಹೊತ್ತಿರುತ್ತಿದ್ದನು. ಗಮನಾರ್ಹ ಸಂಗತಿಯೆಂದರೆ, ವಿಷಯಪತಿಯನ್ನು ನೇರವಾಗಿ ಚಕ್ರವರ್ತಿಯು ನೇಮಿಸುವುದಿಲ್ಲ; ಬದಲಾಗಿ ಸಂಬಂಧಿತ ಪ್ರಾಂತ್ಯದ ರಾಜ್ಯಪಾಲ–ಉಪರಿಕ ನೇಮಕ ಮಾಡುತ್ತಿದ್ದನು. ಇದರಿಂದ ಗುಪ್ತರ ಆಡಳಿತದಲ್ಲಿ ಪ್ರಾಂತೀಯ ಅಧಿಕಾರಿಗಳಿಗೆ ನಿರ್ದಿಷ್ಟ ಮಟ್ಟದ ಆಡಳಿತಾತ್ಮಕ ಸ್ವಾಯತ್ತತೆ ನೀಡಲಾಗಿತ್ತು. ಉತ್ತರ ಬಂಗಾಳದಲ್ಲಿ ದೊರೆತಿರುವ ಗುಪ್ತಕಾಲೀನ ಶಾಸನಗಳು ಜಿಲ್ಲಾ ಮತ್ತು ಸ್ಥಳೀಯ ಆಡಳಿತದ ಕಾರ್ಯವೈಖರಿಯನ್ನು, ಸರ್ಕಾರಿ ಭೂಮಿಯ ಮಾರಾಟ, ದಾನ ಹಾಗೂ ಭೂ ದಾಖಲೆಗಳ ನಿರ್ವಹಣೆಯನ್ನು ಉಲ್ಲೇಖಿಸಿರುತ್ತವೆ. ಆಡಳಿತಾತ್ಮಕ ಕಾರ್ಯಗಳಲ್ಲಿ ಕುಮಾರಮಾತ್ಯರು ಅಥವಾ ಸಮಾನ ಶ್ರೇಣಿಯ ಅಧಿಕಾರಿಗಳು, ನಗರ ಮಂಡಳಿ–

ಅಧಿಷ್ಠಾನಾಧಿಕರಣ, ಜಿಲ್ಲಾ ಕಚೇರಿ–ವಿಷಯಾಧಿಕರಣ ಹಾಗೂ ಅಷ್ಟಕುಲಾಧಿಕರಣ–ಗ್ರಾಮೀಣ ಮಂಡಳಿಗಳು ಭಾಗವಹಿಸುತ್ತಿದ್ದವು. ನಗರ ಮಂಡಳಿ–ಅಧಿಷ್ಠಾನಾಧಿಕರಣವು ನಗರ ಆಡಳಿತದ ಪ್ರಮುಖ ಸಂಸ್ಥೆಯಾಗಿತ್ತು. ಈ ನಗರಶ್ರೇಷ್ಠಿ–ವ್ಯಾಪಾರಿ ಸಂಘದ ಅಧ್ಯಕ್ಷ, ಸಾರ್ಥವಾಹ–ಪ್ರಮುಖ ವ್ಯಾಪಾರಿ ಹಾಗೂ ವ್ಯಾಪಾರ ಕಾರವಾನ್‌ಗಳ ನಾಯಕ, ಪ್ರಥಮ ಕುಲಿಕ–ಕುಶಲಕರ್ಮಿಗಳ ಅಥವಾ ಶಿಲ್ಪಿಗಳ ಮುಖ್ಯಸ್ಥ, ಪ್ರಥಮ ಕಾಯಸ್ಥ–ಮುಖ್ಯ ಬರಹಗಾರ ಹಾಗೂ ದಾಖಲೆಗಳ ನಿರ್ವಹಣಾಧಿಕಾರಿಯಾಗಿದ್ದರು. ಭೂ ವ್ಯವಹಾರಗಳು, ತೆರಿಗೆ ನಿರ್ವಹಣೆ, ನಗರಾಭಿವೃದ್ಧಿ ಹಾಗೂ ಸಾರ್ವಜನಿಕ ಆಡಳಿತದ ವಿಷಯಗಳಲ್ಲಿ ಈ ಮಂಡಳಿಯು ಸರ್ಕಾರಕ್ಕೆ ಸಹಕಾರ ನೀಡುತ್ತಿತ್ತು. ಗ್ರಾಮೀಣ ಆಡಳಿತ, ಭೂ ವ್ಯವಹಾರಗಳು, ತೆರಿಗೆ ಸಂಗ್ರಹಣೆ ಹಾಗೂ ಸ್ಥಳೀಯ ವಿವಾದಗಳ ಪರಿಹಾರದಲ್ಲಿ ಈ ಮಂಡಳಿಯು ಪ್ರಮುಖ ಪಾತ್ರವನ್ನು ವಹಿಸುತ್ತಿತ್ತು. ಇದಲ್ಲದೆ, ಪ್ರಾಚೀನ ವೈಶಾಲಿ ಪ್ರದೇಶದಲ್ಲಿ ಪತ್ತೆಯಾದ ಗುಪ್ತಕಾಲೀನ ಮುದ್ರೆಗಳ ಮೇಲಿನ ಶಾಸನಗಳು ಉತ್ತರ ಬಿಹಾರದಲ್ಲಿಯೂ ಜಿಲ್ಲಾ ಮಂಡಳಿಗಳು ಹಾಗೂ ನಗರ ಮಂಡಳಿಗಳು ಕಾರ್ಯನಿರ್ವಹಿಸುತ್ತಿದ್ದವು ಎಂಬುದನ್ನು ದೃಢೀಕರಿಸುತ್ತವೆ. ಇದರಿಂದ ಗುಪ್ತರ ಆಡಳಿತದಲ್ಲಿ ಸ್ಥಳೀಯ ಸ್ವ–ಆಡಳಿತ ವ್ಯವಸ್ಥೆಯು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ, ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಸಂಘಟಿತ ರೂಪದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ.

### ಗುಪ್ತರ ಆಡಳಿತ ವ್ಯವಸ್ಥೆಯ ಸಾಮಾಜಿಕ–ಆರ್ಥಿಕ ಹಿನ್ನೆಲೆ

ಗುಪ್ತರು ರೂಪಿಸಿದ ಆಡಳಿತ ವ್ಯವಸ್ಥೆಯ ಸ್ವರೂಪವನ್ನು ಕೇವಲ ರಾಜಕೀಯ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುವುದು ಸಮರ್ಪಕವಲ್ಲ. ಗುಪ್ತರ ಆಡಳಿತದ ವಿಕೇಂದ್ರೀಕೃತ ಸ್ವರೂಪವು ಅವರ ಆಡಳಿತಾತ್ಮಕ ನೀತಿಗಳ ಫಲಿತಾಂಶ ಮಾತ್ರವಾಗಿರದೆ, ಆ ಕಾಲದಲ್ಲಿ ಸಂಭವಿಸಿದ ಸಾಮಾಜಿಕ–ಆರ್ಥಿಕ ಪರಿವರ್ತನೆಗಳ ಪ್ರತಿಫಲವಾಗಿತ್ತು. ಗುಪ್ತ ಯುಗದಲ್ಲಿ ವಿದೇಶಿ ವ್ಯಾಪಾರದ ಪ್ರಮಾಣವು ಹಿಂದಿನ ಕುಶಾಣ ಮತ್ತು ಶಾತವಾಹನರ ಕಾಲಕ್ಕೆ ಹೋಲಿಸಿದರೆ ಸ್ವಲ್ಪ ಮಟ್ಟಿಗೆ ಕುಸಿದಿತ್ತು. ರೋಮನ್ ಸಾಮ್ರಾಜ್ಯದೊಂದಿಗೆ ಭಾರತ ಹೊಂದಿದ್ದ ವ್ಯಾಪಾರ ಸಂಬಂಧಗಳ ಕ್ಷೀಣತೆಯು ವಿದೇಶಿ ವ್ಯಾಪಾರದ ಮೇಲೆ ಪರಿಣಾಮ ಬೀರಿತು. ಆದಾಗ್ಯೂ, ಈ ಕುಸಿತವು ಗುಪ್ತ ಸಾಮ್ರಾಜ್ಯದ ಆರ್ಥಿಕತೆಯನ್ನು ಸಂಪೂರ್ಣವಾಗಿ ದುರ್ಬಲಗೊಳಿಸಲಿಲ್ಲ. ಬದಲಾಗಿ, ಈ ಅವಧಿಯಲ್ಲಿ ಕೃಷಿ ವಿಸ್ತರಣೆ ಮತ್ತು ಆಂತರಿಕ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಮಹತ್ವ ದೊರೆಯಿತು. ಗುಪ್ತ ರಾಜರು, ವಿಶೇಷವಾಗಿ ಮಧ್ಯ ಭಾರತ ಮತ್ತು ದಕ್ಷಿಣ ಭಾರತದ (ದಖ್ಖನ್) ಕೃಷಿಗೆ ಒಳಪಡದ ಅರಣ್ಯ ಮತ್ತು ಪಾಳು ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಬ್ರಾಹ್ಮಣರಿಗೆ ವ್ಯಾಪಕವಾಗಿ ಭೂದಾನಗಳನ್ನು ನೀಡಿದರು. ಈ ಭೂದಾನಗಳು ಕೇವಲ ಧಾರ್ಮಿಕ ಉದ್ದೇಶಗಳಿಗೆ ಸೀಮಿತವಾಗಿರದೆ, ಹೊಸ ಪ್ರದೇಶಗಳಲ್ಲಿ ಕೃಷಿಯನ್ನು ವಿಸ್ತರಿಸುವುದು, ಹೊಸ ವಸತಿಗಳನ್ನು ನಿರ್ಮಿಸುವುದು ಹಾಗೂ ಸ್ಥಳೀಯ ಆಡಳಿತವನ್ನು ಸಂಘಟಿಸುವ ಉದ್ದೇಶವನ್ನೂ ಹೊಂದಿದ್ದವು. ಬ್ರಾಹ್ಮಣರು ಈ ಪ್ರದೇಶಗಳಲ್ಲಿ ನೆಲೆಸಿದ್ದರಿಂದ ಕೃಷಿಯ ವಿಸ್ತರಣೆ, ಗ್ರಾಮಗಳ ಸ್ಥಾಪನೆ ಹಾಗೂ ಸಂಸ್ಕೃತಿಯ ಪ್ರಸಾರಕ್ಕೆ ಉತ್ತೇಜನ ದೊರೆಯಿತು.

### ಗುಪ್ತರ ಕಾಲದಲ್ಲಿ ರಾಜಾಧಿಕಾರದ ಸ್ವರೂಪ

ಗುಪ್ತರ ಆಳ್ವಿಕೆಯ ಅವಧಿಯಲ್ಲಿ ಭಾರತೀಯ ರಾಜಪ್ರಭುತ್ವದ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳು ಕಂಡುಬಂದವು. ಮೌರ್ಯರಂತೆ ಅತ್ಯಂತ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಅನುಸರಿಸುವ ಬದಲು, ಗುಪ್ತರು ಸಾಮಂತಶಾಹಿ ಪ್ರವೃತ್ತಿಯನ್ನು ಒಳಗೊಂಡ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದರು. ಈ ಹಿನ್ನೆಲೆಯಲ್ಲಿ ಗುಪ್ತ ಚಕ್ರವರ್ತಿಗಳ ರಾಜಾಧಿಕಾರವು

ಸೈದ್ಧಾಂತಿಕವಾಗಿ ಸರ್ವೋಚ್ಚವಾಗಿದ್ದರೂ, ಅದರ ಪ್ರಾಯೋಗಿಕ ವ್ಯಾಪ್ತಿ ಅನೇಕ ಸಂದರ್ಭಗಳಲ್ಲಿ ಸಾಮಂತರು ಮತ್ತು ಅಧೀನ ರಾಜರ ಅಧಿಕಾರದಿಂದ ಸೀಮಿತವಾಗಿತ್ತು. ಗುಪ್ತ ಅರಸರು ತಮ್ಮ ಸಾರ್ವಭೌಮ ಸ್ಥಾನಮಾನವನ್ನು ಪ್ರತಿಪಾದಿಸಲು ಮಹಾರಾಜಾಧಿರಾಜ, ಪರಮಭಟ್ಟಾರಕ, ಪರಮೇಶ್ವರ ಹಾಗೂ ಪರಮದೈವತಯಂತಹ ವೈಭವಪೂರ್ಣ ಬಿರುದುಗಳನ್ನು ಧರಿಸುತ್ತಿದ್ದರು. ಇಂತಹ ಬಿರುದುಗಳು ಕೇವಲ ರಾಜಕೀಯ ಪ್ರತಿಷ್ಠೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿರಲಿಲ್ಲ; ಅವು ಗುಪ್ತ ಚಕ್ರವರ್ತಿಗಳ ಅಧೀನದಲ್ಲಿ ಅನೇಕ ಸಣ್ಣಪುಟ್ಟ ರಾಜರು ಮತ್ತು ಸಾಮಂತ ಆಡಳಿತಗಾರರು ಅಸ್ತಿತ್ವದಲ್ಲಿದ್ದರು ಎಂಬುದನ್ನೂ ಸೂಚಿಸುತ್ತವೆ. ಅಂದರೆ, ಈ ಬಿರುದುಗಳ ಬಳಕೆಯು ಗುಪ್ತ ಸಾಮ್ರಾಜ್ಯದ ಬಹುಹಂತದ ರಾಜಕೀಯ ರಚನೆಯನ್ನು ಪ್ರತಿಬಿಂಬಿಸುತ್ತದೆ. ಸಮುದ್ರಗುಪ್ತನ ಅಲಹಾಬಾದ್ ಸ್ತಂಭ ಶಾಸನವು ಗಡಿಭಾಗದ ರಾಜ್ಯಗಳು, ಗಣರಾಜ್ಯಗಳು, ಅರಣ್ಯ ರಾಜ್ಯಗಳು ಹಾಗೂ ದಕ್ಷಿಣ ಭಾರತದ ರಾಜರುಗಳ ದೀರ್ಘ ಪಟ್ಟಿಯನ್ನು ಉಲ್ಲೇಖಿಸಲಾಗಿದೆ. ಇವರಲ್ಲಿ ಬಹುತೇಕ ರಾಜ್ಯಗಳನ್ನು ನೇರವಾಗಿ ಗುಪ್ತ ಸಾಮ್ರಾಜ್ಯಕ್ಕೆ ವಿಲೀನಗೊಳಿಸಲಿಲ್ಲ; ಬದಲಾಗಿ, ಅವರಿಗೆ ಅಧೀನ ಸ್ವಾಯತ್ತತೆಯನ್ನು ನೀಡಲಾಯಿತು. ಈ ರಾಜರು ಗುಪ್ತ ಚಕ್ರವರ್ತಿಯ ಸಾರ್ವಭೌಮತ್ವವನ್ನು ಅಂಗೀಕರಿಸಿ, ವಾರ್ಷಿಕ ಕಾಣಿಕೆ ಸಲ್ಲಿಸುವುದು, ಯುದ್ಧಕಾಲದಲ್ಲಿ ಸೈನಿಕ ನೆರವು ನೀಡುವುದು ಹಾಗೂ ರಾಜತಾಂತ್ರಿಕ ನಿಷ್ಠೆಯನ್ನು ಪ್ರದರ್ಶಿಸುವ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಗುಪ್ತ ಸಾಮ್ರಾಜ್ಯದ ಪ್ರಮುಖ ಪ್ರದೇಶಗಳಾದ ಉತ್ತರ ಬಂಗಾಳ, ಬಿಹಾರ ಮತ್ತು ಉತ್ತರ ಪ್ರದೇಶಗಳನ್ನು ಹೊರತುಪಡಿಸಿ, ಉಳಿದ ಅನೇಕ ಪ್ರದೇಶಗಳನ್ನು ಪರಿವ್ರಾಜಕ, ಉಚ್ಚಕಲ್ಪದಂತಹ ಸಾಮಂತ ರಾಜವಂಶಗಳು ಆಡಳಿತ ನಡೆಸುತ್ತಿದ್ದರು. ಇವರು ಗುಪ್ತ ಚಕ್ರವರ್ತಿಯ ಅಧೀನದಲ್ಲಿದ್ದರೂ ತಮ್ಮ ಆಂತರಿಕ ಆಡಳಿತದಲ್ಲಿ ಸಾಕಷ್ಟು ಸ್ವಾಯತ್ತತೆಯನ್ನು ಹೊಂದಿದ್ದರು. ಇವರ ಪ್ರಮುಖ ಕರ್ತವ್ಯಗಳೆಂದರೆ; ಚಕ್ರವರ್ತಿಗೆ ಗೌರವ ಸಲ್ಲಿಸುವುದು, ಕಪ್ಪ–ಕಾಣಿಕೆ ಪಾವತಿಸುವುದು, ಅಗತ್ಯವಿದ್ದಾಗ ಸೈನಿಕ ನೆರವು ನೀಡುವುದು ಹಾಗೂ ಕೆಲವು ಸಂದರ್ಭಗಳಲ್ಲಿ ವೈವಾಹಿಕ ಸಂಬಂಧಗಳನ್ನು ಸ್ಥಾಪಿಸುವ ಮೂಲಕ ರಾಜಕೀಯ ನಿಷ್ಠೆಯನ್ನು ಪ್ರದರ್ಶಿಸುವುದಾಗಿತ್ತು. ರಾಜಕೀಯ ವಿವಾಹಗಳು ಸಾಮ್ರಾಜ್ಯದ ಏಕತೆಯನ್ನು ಬಲಪಡಿಸುವ ಒಂದು ಪ್ರಮುಖ ರಾಜತಾಂತ್ರಿಕ ಸಾಧನವಾಗಿದ್ದವು. ಅನಂತರದ ಗುಪ್ತರ ಅವಧಿಯಲ್ಲಿ ಸಾಮಂತ ರಾಜರ ಅಧಿಕಾರ ಇನ್ನಷ್ಟು ವಿಸ್ತರಿಸಿತು. ಅವರು ಗುಪ್ತ ಚಕ್ರವರ್ತಿಯ ಸಾರ್ವಭೌಮತ್ವವನ್ನು ಸಾಂಕೇತಿಕವಾಗಿ ಒಪ್ಪಿಕೊಂಡಿದ್ದರೂ, ಸ್ವತಂತ್ರವಾಗಿ ಭೂದಾನಗಳನ್ನು ನೀಡುವ ಅಧಿಕಾರವನ್ನು ಚಲಾಯಿಸಲು ಪ್ರಾರಂಭಿಸಿದರು. ಭೂದಾನ ನೀಡುವುದು ಸಾಮಾನ್ಯವಾಗಿ ಸಾರ್ವಭೌಮ ಅಧಿಕಾರದ ಸಂಕೇತವಾಗಿದ್ದರಿಂದ, ಈ ಬೆಳವಣಿಗೆಯು ಕೇಂದ್ರಾಡಳಿತದ ಶಕ್ತಿ ಕ್ರಮೇಣ ಕುಗ್ಗುತ್ತಿರುವುದನ್ನು ಸೂಚಿಸುತ್ತದೆ. ಗುಪ್ತ ಸಾಮ್ರಾಜ್ಯದ ಅವನತಿಯೊಂದಿಗೆ ಈ ಸಾಮಂತರು ಇನ್ನಷ್ಟು ಬಲಿಷ್ಠರಾಗಿ, ಅಂತಿಮವಾಗಿ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಇದರಿಂದ ಗುಪ್ತ ಸಾಮ್ರಾಜ್ಯದ ರಾಜಕೀಯ ಏಕತೆ ದುರ್ಬಲಗೊಂಡು, ಅನಂತರದ ಮಧ್ಯಕಾಲೀನ ಸಾಮಂತಶಾಹಿ ವ್ಯವಸ್ಥೆಯ ಬೆಳವಣಿಗೆಗೆ ಅಡಿಪಾಯ ನಿರ್ಮಾಣವಾಯಿತು. ಗುಪ್ತರ ಸೈನಿಕ ವ್ಯವಸ್ಥೆಯಲ್ಲಿಯೂ ಈ ವಿಕೇಂದ್ರೀಕರಣದ ಪ್ರಭಾವ ಕಂಡುಬರುತ್ತದೆ. ಸಾಮ್ರಾಜ್ಯದ ಸೇನೆಯ ಬಹುಪಾಲು ಸಾಮಂತ ರಾಜರು ಒದಗಿಸುತ್ತಿದ್ದ ಸೈನಿಕ ಪಡೆಗಳಿಂದಲೇ ರೂಪುಗೊಂಡಿತ್ತು ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಇದರಿಂದ ಕೇಂದ್ರ ಸರ್ಕಾರವು ತನ್ನದೇ ಆದ ಬಲಿಷ್ಠ ಶಾಶ್ವತ ಸೈನ್ಯದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರದೆ, ಸಾಮಂತರ ಸಹಕಾರವನ್ನು ಅವಲಂಬಿಸಬೇಕಾದ ಪರಿಸ್ಥಿತಿ ಉಂಟಾಯಿತು. ಇದೇ

ರೀತಿ, ಕುದುರೆಗಳು ಮತ್ತು ಆನೆಗಳ ಮೇಲಿನ ರಾಜ್ಯದ ಏಕಸ್ವಾಮ್ಯವೂ ಕಡಿಮೆಯಾಯಿತು. ಮೌರ್ಯರ ಕಾಲದಲ್ಲಿ ಯುದ್ಧೋಪಕರಣಗಳ ಮೇಲಿನ ನಿಯಂತ್ರಣ ರಾಜ್ಯದ ಕೈಯಲ್ಲಿದ್ದರೆ, ಗುಪ್ತರ ಕಾಲದಲ್ಲಿ ಸಾಮಂತರು ಹಾಗೂ ಶ್ರೀಮಂತ ವ್ಯಕ್ತಿಗಳೂ ಕುದುರೆ ಮತ್ತು ಆನೆಗಳನ್ನು ಹೊಂದುವ ಹಕ್ಕನ್ನು ಪಡೆದುಕೊಂಡರು. ಇದು ಸೈನಿಕ ಅಧಿಕಾರದ ವಿಕೇಂದ್ರೀಕರಣವನ್ನು ಮತ್ತಷ್ಟು ಬಲಪಡಿಸಿತು. ಗುಪ್ತರ ಆಡಳಿತ ವ್ಯವಸ್ಥೆಯು ಸರಳತೆ ಮತ್ತು ಕಡಿಮೆ ಸಂಕೀರ್ಣತೆ. ಮೌರ್ಯರ ಆಡಳಿತದಂತೆ ಅತ್ಯಂತ ಸಂಘಟಿತ ಮತ್ತು ವಿಶಾಲ ಅಧಿಕಾರಶಾಹಿ ವ್ಯವಸ್ಥೆ ಗುಪ್ತರ ಕಾಲದಲ್ಲಿ ಕಂಡುಬರುವುದಿಲ್ಲ. ವಿಶೇಷವಾಗಿ ಆರ್ಥಿಕ ಮತ್ತು ಹಣಕಾಸು ಇಲಾಖೆಗಳ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿತ್ತು. ಇದಲ್ಲದೆ, ಒಬ್ಬನೇ ಅಧಿಕಾರಿ ಒಂದಕ್ಕಿಂತ ಹೆಚ್ಚು ಆಡಳಿತಾತ್ಮಕ ಹುದ್ದೆಗಳನ್ನು ನಿರ್ವಹಿಸುವ ಪದ್ಧತಿ ಅಸ್ತಿತ್ವದಲ್ಲಿತ್ತು. ಅನೇಕ ಹುದ್ದೆಗಳು ವಂಶಪಾರಂಪರ್ಯವಾಗಿ ವರ್ಗಾಯಿಸಲ್ಪಡುತ್ತಿದ್ದವು. ಈ ಬೆಳವಣಿಗೆಯಿಂದ ಆಡಳಿತದಲ್ಲಿ ಅನುಭವದ ನಿರಂತರತೆ ಉಳಿದರೂ, ರಾಜನ ನೇರ ನಿಯಂತ್ರಣವು ಕ್ರಮೇಣ ದುರ್ಬಲಗೊಳ್ಳುವ ಸಾಧ್ಯತೆಯೂ ಹೆಚ್ಚಾಯಿತು.

**ಭೂದಾನ ಪದ್ಧತಿ, ಆಡಳಿತಾತ್ಮಕ ವಿನಾಯಿತಿಗಳು ಮತ್ತು ಸಾಮಂತಶಾಹಿಯ ಬೆಳವಣಿಗೆ:**

ಗುಪ್ತ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಕಂಡುಬರುವ ಅತ್ಯಂತ ಮಹತ್ವದ ಬೆಳವಣಿಗೆಗಳಲ್ಲಿ ಪುರೋಹಿತರು, ಬ್ರಾಹ್ಮಣರು ಹಾಗೂ ದೇವಾಲಯಗಳಿಗೆ ಭೂದಾನಗಳನ್ನು ನೀಡುವ ಪದ್ಧತಿಯ ವಿಸ್ತರಣೆ ಪ್ರಮುಖವಾಗಿದೆ. ಈ ಪದ್ಧತಿಯು ಸಂಪೂರ್ಣವಾಗಿ ಗುಪ್ತರ ಕಾಲದಲ್ಲಿ ಹುಟ್ಟಿಕೊಂಡದ್ದಲ್ಲ; ಇದರ ಆರಂಭಿಕ ರೂಪವನ್ನು ದಖ್ಖನ್ ಪ್ರದೇಶದ ಶಾತವಾಹನರ ಆಳ್ವಿಕೆಯಲ್ಲಿ ಕಾಣಬಹುದು. ಆದರೆ, ಗುಪ್ತರ ಕಾಲದಲ್ಲಿ ಈ ಪದ್ಧತಿಯು ಹೆಚ್ಚು ವ್ಯಾಪಕವಾಗುವುದರ ಜೊತೆಗೆ, ಭೂದಾನದ ಸ್ವರೂಪದಲ್ಲಿಯೂ ಮಹತ್ವದ ಬದಲಾವಣೆಗಳು ಸಂಭವಿಸಿದವು. ವಿಶೇಷವಾಗಿ, ಭೂದಾನಗಳೊಂದಿಗೆ ಆಡಳಿತಾತ್ಮಕ ಮತ್ತು ನ್ಯಾಯಾಂಗ ಅಧಿಕಾರಗಳನ್ನು ಸಹ ಫಲಾನುಭವಿಗಳಿಗೆ ನೀಡುವುದು ಗುಪ್ತ ಯುಗದ ವಿಶಿಷ್ಟ ಲಕ್ಷಣವಾಗಿತ್ತು. ಗುಪ್ತಕಾಲೀನ ಭೂದಾನ ಶಾಸನಗಳು ಫಲಾನುಭವಿಗಳಿಗೆ ಕೇವಲ ಭೂಮಿಯ ಸ್ವಾಮ್ಯವನ್ನು ನೀಡುತ್ತಿರಲಿಲ್ಲ; ಅದರೊಂದಿಗೆ ಅನೇಕ ಆರ್ಥಿಕ, ಆಡಳಿತಾತ್ಮಕ ಮತ್ತು ನ್ಯಾಯಾಂಗ ವಿಶೇಷಾಧಿಕಾರಗಳನ್ನೂ ನೀಡುತ್ತಿದ್ದವು. ದಾನವಾಗಿ ನೀಡಲಾದ ಭೂಮಿಯಲ್ಲಿ ಕೇಂದ್ರ ಅಥವಾ ಪ್ರಾಂತೀಯ ಅಧಿಕಾರಿಗಳ ಹಸ್ತಕ್ಷೇಪವನ್ನು ನಿಷೇಧಿಸಲಾಗುತ್ತಿತ್ತು. ಈ ರೀತಿಯ ಹಸ್ತಕ್ಷೇಪ ರಹಿತ ಆಡಳಿತವು ಶಾತವಾಹನರ ಕೆಲವು ಶಾಸನಗಳಲ್ಲಿಯೂ ಕಂಡುಬಂದರೂ, ಗುಪ್ತರ ಕಾಲದಲ್ಲಿ ಇದು ಹೆಚ್ಚು ಸಂಘಟಿತ ಹಾಗೂ ವ್ಯಾಪಕ ಸ್ವರೂಪವನ್ನು ಪಡೆದುಕೊಂಡಿತು. ಭೂದಾನದ ಫಲಾನುಭವಿಗಳಿಗೆ ದಾನವಾಗಿ ನೀಡಲಾದ ಗ್ರಾಮದ ತೆರಿಗೆ ಸಂಗ್ರಹಣೆ, ನ್ಯಾಯನಿರ್ವಹಣೆ, ದಂಡ ವಿಧಿಸುವುದು ಹಾಗೂ ಪೊಲೀಸ್ ಅಧಿಕಾರಗಳನ್ನು ಚಲಾಯಿಸುವ ಹಕ್ಕನ್ನು ನೀಡಲಾಗುತ್ತಿತ್ತು. ಇದರ ಪರಿಣಾಮವಾಗಿ, ಆ ಗ್ರಾಮವು ಅನೇಕ ಸಂದರ್ಭಗಳಲ್ಲಿ ನೇರವಾಗಿ ರಾಜ್ಯದ ಆಡಳಿತ ವ್ಯಾಪ್ತಿಯಿಂದ ಹೊರಬಂದು, ಫಲಾನುಭವಿಯ ಅಧೀನದಲ್ಲಿರುವ ಸ್ವಾಯತ್ತ ಆಡಳಿತ ಘಟಕವಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ಅಧಿಕಾರಗಳು ಸಾಮಾನ್ಯವಾಗಿ ಬ್ರಾಹ್ಮಣರು, ದೇವಾಲಯಗಳು ಅಥವಾ ಧಾರ್ಮಿಕ ಸಂಸ್ಥೆಗಳ ಕೈಗೆ ಸೇರುತ್ತಿದ್ದವು.

**ಉಪಸಂಹಾರ**

ಗುಪ್ತರ ಆಡಳಿತ ವ್ಯವಸ್ಥೆಯು ಭಾರತೀಯ ಆಡಳಿತ ಇತಿಹಾಸದಲ್ಲಿ ಅತ್ಯಂತ ಸುಸಂಘಟಿತ, ಪರಿಣಾಮಕಾರಿ ಹಾಗೂ ಪರಿವರ್ತನಾತ್ಮಕ ಆಡಳಿತ ಮಾದರಿಯಾಗಿ ಹೊರಹೊಮ್ಮುತ್ತದೆ. ಮೌರ್ಯರ ಕೇಂದ್ರೀಕೃತ ಆಡಳಿತ ಪದ್ಧತಿಯನ್ನು ಸಂಪೂರ್ಣವಾಗಿ ಅನುಸರಿಸದೆ, ಕೇಂದ್ರ ಮತ್ತು ಸ್ಥಳೀಯ ಆಡಳಿತದ

ನಡುವೆ ಸಮತೋಲನವನ್ನು ಸಾಧಿಸುವ ಉದ್ದೇಶದಿಂದ ಗುಪ್ತರು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು. ವಿಶಾಲ ಸಾಮ್ರಾಜ್ಯವನ್ನು ಸಮರ್ಥವಾಗಿ ಆಡಳಿತ ನಡೆಸಲು ಈ ವ್ಯವಸ್ಥೆಯು ಆರಂಭಿಕ ಹಂತದಲ್ಲಿ ಯಶಸ್ವಿಯಾಯಿತು. ಸಾಮಂತರು, ಪ್ರಾಂತೀಯ ಆಡಳಿತಗಾರರು, ಕುಮಾರಮಾತ್ಯರು, ವಿಷಯಪತಿಗಳು ಹಾಗೂ ಸ್ಥಳೀಯ ಮಂಡಳಿಗಳ ಸಹಭಾಗಿತ್ವವು ಆಡಳಿತದ ದಕ್ಷತೆಯನ್ನು ಹೆಚ್ಚಿಸಿತು. ಆದಾಗ್ಯೂ, ಎರಡನೇ ಚಂದ್ರಗುಪ್ತ–ವಿಕ್ರಮಾದಿತ್ಯನ ಮರಣದ ಅನಂತರ ಈ ಆಡಳಿತ ವ್ಯವಸ್ಥೆಯಲ್ಲಿದ್ದ ಕೆಲವು ಮೂಲಭೂತ ದುರ್ಬಲತೆಗಳು ಕ್ರಮೇಣ ಹೊರಹೊಮ್ಮಲಾರಂಭಿಸಿದವು. ಪ್ರಾಂತೀಯ ಆಡಳಿತಗಾರರು ಮತ್ತು ಸಾಮಂತರಿಗೆ ನೀಡಲಾಗಿದ್ದ ವ್ಯಾಪಕ ಅಧಿಕಾರಗಳು, ಭೂದಾನಗಳ ಮೂಲಕ ಸ್ಥಳೀಯ ಶಕ್ತಿಗಳಿಗೆ ದೊರೆತ ಆಡಳಿತಾತ್ಮಕ ಸ್ವಾಯತ್ತತೆ ಹಾಗೂ ಹುದ್ದೆಗಳ ವಂಶಪಾರಂಪರ್ಯ ಸ್ವರೂಪ ಇವುಗಳ ಪರಿಣಾಮವಾಗಿ ಕೇಂದ್ರ ಸರ್ಕಾರದ ಅಧಿಕಾರವು ಕ್ರಮೇಣ ಕ್ಷೀಣಿಸತೊಡಗಿತು. ಪರಿಣಾಮವಾಗಿ, ವಿವಿಧ ಪ್ರದೇಶಗಳ ಸಾಮಂತರು ತಮ್ಮ ಪ್ರದೇಶಗಳಲ್ಲಿ ಸ್ವತಂತ್ರ ಆಡಳಿತವನ್ನು ಸ್ಥಾಪಿಸಲು ಮುಂದಾದರು. ಅವರು ಕೇವಲ ಚಕ್ರವರ್ತಿಯ ಅಧೀನಸ್ಥರಾಗಿರದೆ, ಸ್ವತಂತ್ರ ರಾಜಕೀಯ ಶಕ್ತಿಗಳಾಗಿ ಬೆಳೆಯತೊಡಗಿದರು. ಈ ಬೆಳವಣಿಗೆಯು ಗುಪ್ತ ಸಾಮ್ರಾಜ್ಯದ ರಾಜಕೀಯ ಏಕತೆಗೆ ಗಂಭೀರ ಸವಾಲಾಗಿ ಪರಿಣಮಿಸಿತು. ಗುಪ್ತ ಸಾಮ್ರಾಜ್ಯದ ಅಂತಿಮ ಹಂತದಲ್ಲಿ ಕೇಂದ್ರ ಸರ್ಕಾರವು ಸಾಮಂತರ ಮೇಲೆ ಪರಿಣಾಮಕಾರಿ ನಿಯಂತ್ರಣವನ್ನು ಕಳೆದುಕೊಂಡಿತು. ಇದರ ಪರಿಣಾಮವಾಗಿ, ಗುಪ್ತ ಸಾಮ್ರಾಜ್ಯವು ಕ್ರಮೇಣ ವಿಘಟನೆಯ ಹಾದಿಯನ್ನು ಹಿಡಿಯಿತು. ಈ ಹಿನ್ನೆಲೆಯಲ್ಲಿ ಅನೇಕ ಇತಿಹಾಸಕಾರರು ಗುಪ್ತೋತ್ತರ ಭಾರತದ ಇತಿಹಾಸವು ಮೂಲತಃ ಸಾಮಂತರ ಇತಿಹಾಸವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಗುಪ್ತ ಸಾಮ್ರಾಜ್ಯದ ಪತನದ ಅನಂತರ ಪರಿವ್ರಾಜಕರು, ಮೌಖರಿಗಳು, ವರ್ಧನರು, ಕಲಚೂರಿಗಳು, ಚಾಲುಕ್ಯರು, ರಾಷ್ಟ್ರಕೂಟರಂತಹ ಪ್ರಾದೇಶಿಕ ಶಕ್ತಿಗಳು ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದವು. ಈ ಬೆಳವಣಿಗೆಯು ಭಾರತೀಯ ಇತಿಹಾಸದಲ್ಲಿ ಸಾಮಂತಾಧಾರಿತ ರಾಜಕೀಯ ವ್ಯವಸ್ಥೆಯ ವಿಸ್ತರಣೆಗೆ ಕಾರಣವಾಯಿತು. ಆದಾಗ್ಯೂ, ಗುಪ್ತರ ಆಡಳಿತ ವ್ಯವಸ್ಥೆಯ ಪ್ರಭಾವವು ಅವರ ಸಾಮ್ರಾಜ್ಯದ ಪತನದೊಂದಿಗೆ ಕೊನೆಗೊಂಡಿಲ್ಲ. ಅದರ ಆಡಳಿತಾತ್ಮಕ ಪರಂಪರೆ ದೀರ್ಘಕಾಲದವರೆಗೆ ಭಾರತೀಯ ರಾಜಕೀಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿತು. ಗುಪ್ತರ ಕಾಲದಲ್ಲಿ ಬಳಕೆಯಲ್ಲಿದ್ದ ಅನೇಕ ಹುದ್ದೆಗಳು, ಆಡಳಿತಾತ್ಮಕ ಪದನಾಮಗಳು ಹಾಗೂ ಆಡಳಿತ ಪದ್ಧತಿಗಳು ನಂತರದ ರಾಜವಂಶಗಳಲ್ಲಿಯೂ ಮುಂದುವರಿದವು. ವಿಶೇಷವಾಗಿ ಆರಂಭಿಕ ಕಲಚೂರಿಗಳು, ಬಾದಾಮಿಯ ಚಾಲುಕ್ಯರು, ಮಾಲ್ಖೇಡ್‌ನ ರಾಷ್ಟ್ರಕೂಟರು ಹಾಗೂ ಕಲ್ಯಾಣಿಯ ಪಶ್ಚಿಮ ಚಾಲುಕ್ಯರು ಗುಪ್ತರ ಆಡಳಿತ ಮಾದರಿಯನ್ನು ವ್ಯಾಪಕವಾಗಿ ಅಳವಡಿಸಿಕೊಂಡರು. ಕುಮಾರಮಾತ್ಯ, ಮಹಾದಂಡನಾಯಕ, ಸಂಧಿವಿಗ್ರಹಿಕ, ಮಹಾಪ್ರತಿಹಾರ, ವಿಷಯಪತಿಯಂತಹ ಹುದ್ದೆಗಳು ಹಲವು ಶತಮಾನಗಳವರೆಗೆ ಭಾರತೀಯ ಆಡಳಿತ ವ್ಯವಸ್ಥೆಯ ಭಾಗವಾಗಿಯೇ ಉಳಿದವು.

**ಪರಾಮರ್ಶನ ಗ್ರಂಥಗಳು**


- ಕಾಮತ್, ಯು. ಸೂರ್ಯನಾಥ. (2009). *ಕರ್ನಾಟಕದ ಸಂಕ್ಷಿಪ್ತ ಇತಿಹಾಸ.* ಜುಪಿಟರ್ ಬುಕ್ಸ್.
- ಮಹಾಲಿಂಗಂ, ಟಿ. ವಿ. (2008). ಪ್ರಾಚೀನ ಭಾರತದ ಆಡಳಿತ ಮತ್ತು ಸಾಮಾಜಿಕ ಜೀವನ. ವಸಂತ ಪ್ರಕಾಶನ.

- ನೀಲಕಂಠ ಶಾಸ್ತ್ರೀ, ಕೆ. ಎ. (2012). *ದಕ್ಷಿಣ ಭಾರತದ ಇತಿಹಾಸ* (ಸಿ.ಎನ್. ರಾಮಚಂದ್ರನ್, ಅನುವಾದ). ಗೀತಾ ಬುಕ್ ಹೌಸ್.
- ರಾಮಚಂದ್ರರಾವ್, ಎಸ್. ಕೆ. (2010). ಭಾರತೀಯ ಸಂಸ್ಕೃತಿ ಮತ್ತು ಇತಿಹಾಸ. ಪ್ರತಿಭಾ ಪ್ರಕಾಶನ.
- ರಂಗರಾಜನ್, ಎಲ್. ಎನ್. (ಅನು.). (2011). ಕೌಟಿಲ್ಯನ ಅರ್ಥಶಾಸ್ತ್ರ. ಸಪ್ನ ಬುಕ್ ಹೌಸ್.
- ಶರ್ಮಾ, ಆರ್. ಎಸ್. (2015). ಪ್ರಾಚೀನ ಭಾರತದ ರಾಜಕೀಯ ವಿಚಾರಗಳು ಮತ್ತು ಸಂಸ್ಥೆಗಳು. ನವಕರ್ನಾಟಕ ಪ್ರಕಾಶನ.
- ಶರ್ಮಾ, ಆರ್. ಎಸ್. (2016). ಭಾರತದ ಪ್ರಾಚೀನ ಇತಿಹಾಸ. ಸಪ್ನ ಬುಕ್ ಹೌಸ್.
- ಸಿಂಗ್, ಉಪಿಂದರ್. (1986). ಪ್ರಾಚೀನ ಮತ್ತು ಆರಂಭಿಕ ಮಧ್ಯಕಾಲೀನ ಭಾರತದ ಇತಿಹಾಸ. ಪಿಯರ್ಸನ್ ಎಜುಕೇಶನ್.
- ಶೆಟ್ಟರ್, ಎಸ್. (2014). *ಪ್ರಾಚೀನ ಭಾರತದ ಇತಿಹಾಸ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಥಾಪರ್, ರೋಮಿಲಾ. (2014). ಭಾರತದ ಇತಿಹಾಸ: ಮೊದಲ ಭಾಗ. ನ್ಯಾಷನಲ್ ಬುಕ್ ಟ್ರಸ್ಟ್.